ರಾಮನಗರ ಜಿಲ್ಲೆಯಲ್ಲಿ ರೈತರಿಗೆ ಹೈನುಗಾರಿಕೆಯೇ ಬಂಡವಾಳ. ಆದರೆ ಜಾನುವಾರು ಸಂಖ್ಯೆಗಳಿಗೆ ಹೋಲಿಸಿದರೆ ಹಾಲಿನ ಉತ್ಪಾದನೆ ನಿಗದಿತ ಪ್ರಮಾಣದಲ್ಲಿ ಆಗುತ್ತಿಲ್ಲ. ಇದಕ್ಕೆ ಹಲವಾರು ಕಾರಣಗಳು ಇದ್ದರೂ ಮೇವಿನ ಬೆಳೆಯ ಅಭಾವ ಮುಖ್ಯ ಕಾರಣ. ರೈತರು ಹಲವಾರು ಹಸಿರು ಮೇವಿನ ತಳಿಗಳನ್ನು ಬೆಳೆಯುತ್ತಿದ್ದರು. ಮುಖ್ಯವಾಗಿ ಹೆಚ್ಚಿನ ಇಳುವರಿಯನ್ನು ಕೊಡುವುದರ ಜೊತೆ ಉತ್ತಮ ಗುಣಮಟ್ಟ ಹೊಂದಿರುವ ಸುಂಕು ಇಲ್ಲದ ನೇಪಿಯರ್ ಹಲ್ಲಿನತ್ತ ಚಿಂತನೆ ನಡೆಸಿದ್ದರು. ಈ ನಿಟ್ಟಿನಲ್ಲಿ ಭಾರತೀಯ ಹುಲ್ಲುಗಾವಲು ಮತ್ತು ಮೇವು ಸಂಶೋಧನಾ ಸಂಸ್ಥೆ ಧಾರವಾಡ, ಪ್ರಾಂತೀಯ ಸಂಶೋಧನಾ ಕೇಂದ್ರವು ಹೈಬ್ರಿಡ್ ನೇಪಿಯರ್ xಸಜ್ಜೆಯೊಡನೆ ಸಂಕರಣ ಮಾಡಿ 'ಹೈಬ್ರಿಡ್ ನೇಪಿಯರ್' ಮೇವಿನ ಬೆಳೆಯಾದ ಡಿ.ಹೆಚ್.ಎನ್-6 ಮೇವಿನ ತಳಿಯನ್ನು ಬಿಡುಗಡೆ ಮಾಡಿದ್ದರು.

ಈ ಮೇವಿನ ತಳಿಯನ್ನು ಸಂಪೂರ್ಣ ಎಂದು ಸಹ ಕರೆಯುತ್ತಾರೆ. ಆದರೆ ಈ ತಳಿಯು ರಾಮನಗರ ಜಿಲ್ಲೆಗೆ ಸೂಕ್ತವೋ ಅಥವಾ ಸೂಕ್ತವಿಲ್ಲವೋ ಎಂದು ತಿಳಿದಿರಲಿಲ್ಲ. ಈ ಉದ್ದೇಶದಿಂದ ಮೇವಿನ ಇಳುವರಿಯ ಸಾಮರ್ಥ್ಯತೆ ಮತ್ತು ಗುಣಮಟ್ಟವನ್ನು ಪರೀಕ್ಷಿಸಲು, ಕೃಷಿ ವಿಜ್ಞಾನ ಕೇಂದ್ರ ರಾಮನಗರ ಜಿಲ್ಲೆ, ಸತತವಾಗಿ ಕ್ಷೇತ್ರ ಪರೀಕ್ಷೆ ಮತ್ತು ಮುಂಚೂಣಿ ಪ್ರಾತ್ಯಕ್ಷಿಕೆಗಳನ್ನು ಕೈಗೊಂಡಾಗ, ರೈತರು ಸಾಮಾನ್ಯವಾಗಿ ಬೆಳೆಯುವ ನೇಪಿಯರ್ ಎನ್‌ಬಿ-21 ಗೆ ಹೋಲಿಸಿದರೆ ಡಿ.ಹೆಚ್.ಎನ್.-6 ಅಧಿಕ ಇಳುವರಿಯನ್ನು ಕೊಡುತ್ತದೆ ಎಂದು ಪ್ರಾತ್ಯಕ್ಷಿಕೆ ಮೂಲಕ ಕಂಡುಬಂದಿದೆ.

## ಡಿ.ಹೆಚ್.ಎನ್.-6 ಗುಣಲಕ್ಷಣಗಳು

ಈ ಬೆಳೆ ಅತ್ಯಂತ ಎತ್ತರವಾಗಿ ಹಾಗೂ ಹುಲುಸಾಗಿ ಬೆಳೆಯುತ್ತದೆ. ನೋಡಲು ಆಕರ್ಷಕವಾಗಿದ್ದು, ಹೆಚ್ಚು ಹಸಿರಿನಿಂದ ಕಂಗೊಳಿಸುತ್ತದೆ. ಈ ಹುಲ್ಲು ಬಹುವಾರ್ಷಿಕ ಬೆಳೆಯಾಗಿದ್ದು, ಒಮ್ಮೆ ನಾಟಿ ಮಾಡಿದರೆ, ನಾಲ್ಕು ವರ್ಷಗಳವರೆಗೂ ಸತತವಾಗಿ ಮೇವನ್ನು ಪಡೆಯಬಹುದು. ನಾಲ್ಕು ವರ್ಷಗಳ ನಂತರ ಈ ಬೆಳೆಯನ್ನು ಬೇರೆ ಕ್ಷೇತ್ರಕ್ಕೆ ನಾಟಿ ಮಾಡುವುದರಿಂದ ಇಳುವರಿಯ ಮಟ್ಟವನ್ನು ಕಾಪಾಡಿಕೊಳ್ಳಬಹುದು. ಜೌಗು ಮತ್ತು ಜೇಡಿ ಮಣ್ಣು ಹೊರತುಪಡಿಸಿ ಈ ಬೆಳೆಯನ್ನು ಎಲ್ಲಾ ರೀತಿಯ ಮಣ್ಣುಗಳಲ್ಲಿ ಬೆಳೆಯಬಹುದು.

## ಬೇಸಾಯ ಕ್ರಮಗಳು

**ಸೂಕ್ತ ಮಣ್ಣು :** ಈ ಹುಲ್ಲನ್ನು ಗೋಡು ಮಣ್ಣು ಮತ್ತು ಹೆಚ್ಚು ಸಾವಯವ ಅಂಶವಿರುವ ಮಣ್ಣಿನಲ್ಲಿ ಹೇರಳವಾಗಿ ಬೆಳೆಯಬಹುದು ರಸಸಾರ ತಟಸ್ಥವಿರುವ ಮಣ್ಣು ಹೆಚ್ಚು ಸೂಕ್ತ ಮತ್ತು ಸ್ವಲ್ಪ ಕ್ಷಾರ ಮಣ್ಣಿನಲ್ಲಿಯೂ ಸಹ ಚೆನ್ನಾಗಿ ಬರುತ್ತದೆ. ಕೊಳಚೆ ನೀರಿನಲ್ಲೂ ಬೆಳೆಯಬಹುದು, ಆದರೆ ಹೆಚ್ಚಿನ ದಿನಗಳವರೆಗೆ ನೀರು ನಿಲ್ಲಬಾರದು.

**ಭೂಮಿಯ ಸಿದ್ಧತೆ :** ಭೂಮಿಯನ್ನು 2 ರಿಂದ 3 ಬಾರಿ ಚೆನ್ನಾಗಿ ಉಳುಮೆ ಮಾಡಿ, ಸಮತಟ್ಟಾಗಿರುವಂತೆ ತಯಾರು ಮಾಡಬೇಕು. ನಂತರ ಹಲುಬೆಯಿಂದ ಭೂಮಿ ಸಿದ್ಧತೆಗೊಳಿಸಿ ನಂತರ 2 ಅಡಿ ಅಂತರದಲ್ಲಿ ಸಾಲು ಹೊಡೆಯಬೇಕು.

**ನಾಟಿ ಮಾಡುವ ಕಾಲ :** ನಾಟಿ ಮಾಡಲು ಮುಂಗಾರು ಅಂದರೆ ಜೂನ್‌ನಿಂದ-ಆಗಸ್ಟ್‌ವರೆಗೆ ಬಹಳ ಸೂಕ್ತ. ಈ ಕಾಲದಲ್ಲಿ ನಾಟಿ ಮಾಡುವುದರಿಂದ ಹುಲ್ಲಿಗೆ ಸಾಕಷ್ಟು ತೇವಾಂಶ ದೊರಕಿ ಬೇಗನೆ ಭೂಮಿಗೆ ಹೊಂದಿಕೊಂಡು ಚಿಗುರುತ್ತದೆ. ನೀರಾವರಿ ಇದ್ದಲ್ಲಿ ಚಳಿಗಾಲ ಬಿಟ್ಟು ಯಾವುದೇ ಸಮಯದಲ್ಲಿ ಫೆಬ್ರವರಿಯ ನಂತರ ನಾಟಿ ಮಾಡಬಹುದು. ನಾಟಿಗೆ 3 ವಾರ ಮುಂಚಿತವಾಗಿ ಎಕರೆಗೆ ಬೇಕಾಗುವ 3 ಟನ್ ಕೊಟ್ಟಿಗೆ ಗೊಬ್ಬರವನ್ನು ಮಣ್ಣಿನಲ್ಲಿ ಸೇರಿಸಬೇಕು.



ಬೇರಿನ ತುಂಡುಗಳು

ನಾಟಿಗೆ ಬೇರಿನ ತುಂಡುಗಳು ಅಥವಾ ಕಾಂಡದ ತುಂಡುಗಳನ್ನು ಬಳಸಬಹುದು. ಬೇರಿನ ತುಂಡುಗಳನ್ನು ನಾಟಿಗೆ ಬಳಸುವಾಗ ಒಂದು ವರ್ಷ ವಯಸ್ಸಾದ ಬೆಳೆಯಿಂದ ಬೇರಿನ ತುಂಡುಗಳನ್ನು ಆರಿಸಬೇಕು. ಹಾಗೆಯೇ ಕಾಂಡದ ತುಂಡುಗಳನ್ನು ನಾಟಿಗೆ ಬಳಸುವಾಗ ತೆನೆ ಬಂದ ನಂತರದ ಕಾಂಡದ ತುಂಡುಗಳು ನಾಟಿಗೆ ಉಪಯೋಗಿಸಬೇಕು, ಇಲ್ಲದಿದ್ದಲ್ಲಿ ನಾಟಿ ಮಾಡಿದ ಕಡ್ಡಿ ಚಿಗುರದೇ ಒಣಗುತ್ತದೆ. ನಾಟಿ ಮಾಡುವ ಮುಂಚೆ ಶಿಫಾರಸ್ಸಿನಂತೆ ಸಾಲಿನಿಂದ ಸಾಲಿಗೆ 2 ಅಡಿ ಮತ್ತು ಕಾಂಡದ ತುಂಡುಗಳಿಂದ ತುಂಡಿಗೆ 2 ಅಡಿ ಅಂತರದಲ್ಲಿ ಗುರುತು ಮಾಡಿ, ನಂತರ 2 ಕಣ್ಣುಗಳಿರುವ ಕಾಂಡದ ತುಂಡುಗಳನ್ನು ಆರಿಸಿಕೊಂಡು, ಒಂದು ಮಗ್ಗಲಲ್ಲಿ ತಲಾ


ಕಾಂಡದ ತುಂಡುಗಳು

ಒಂದರಂತೆ ಬೇರು ಕಾಂಡದ ತುಂಡುಗಳು 3.5 ಸೆಂ.ಮೀ. ಭೂಮಿಯ ಒಳಭಾಗಕ್ಕೆ ಒಂದು ಕಣ್ಣು ಹೋಗಬೇಕು ಹಾಗೆ ಇನ್ನೊಂದು ಕಣ್ಣು ಭೂಮಿಯ ಮೇಲೆ ಕಾಣುತ್ತಿರವಂತೆ ಕಡ್ಡಿಯ ಸುತ್ತಲು ಮಣ್ಣು ಹಾಕಿ ಭದ್ರಗೊಳಿಸಬೇಕು. ಈ ಅಂತರದಲ್ಲಿ ಎಕರೆಗೆ 11,110 ಬೇರು ಅಥವಾ ಕಾಂಡದ ತುಂಡುಗಳು ಬೇಕಾಗುತ್ತದೆ.

**ಗೊಬ್ಬರ :** ನಾಟಿ ಮಾಡುವ ಮೊದಲು ಎಕರೆಗೆ 3 ಟನ್ ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟನ್ನು ಮಣ್ಣಿಗೆ ಸೇರಿಸಿ ನಂತರ ಶಿಫಾರಸ್ಸು ಮಾಡಿದ ಪೂರ್ತಿ ಸಾರಜನಕವು ಯೂರಿಯಾ ರೂಪದಲ್ಲಿ 35 ಕೆ.ಜಿ.ಯಷ್ಟು ರಸಗೊಬ್ಬರವನ್ನು ನಾಟಿ ಮಾಡುವ ಮುನ್ನ ಸಾಲಿನಲ್ಲಿ ಬೆರೆಸಬೇಕು. ನಾಟಿ ಮಾಡಿದ 15 ದಿನಗಳ ನಂತರ ರಂಜಕವನ್ನು ಎಸ್‌ಎಸ್‌ಪಿ ರೂಪದಲ್ಲಿ ಎಕರೆಗೆ 150 ಕೆ.ಜಿ.ಯನ್ನು ಮಣ್ಣಿನಲ್ಲಿ ಸೇರಿಸಬೇಕು. ಪ್ರತಿ ಕಟಾವಿನ ನಂತರ ಎಕರೆಗೆ 25 ಕೆ.ಜಿ. ಯೂರಿಯಾವನ್ನು ತಪ್ಪದೇ ಹಾಕಬೇಕು ಹಾಗೂ ವರ್ಷಕ್ಕೊಮ್ಮೆ ಮುಂಗಾರಿನಲ್ಲಿ ಶಿಫಾರಸ್ಸು ಮಾಡಿದ 35 ಕೆ.ಜಿ. ಯೂರಿಯಾ ಮತ್ತು 150 ಕೆ.ಜಿ. ಎಸ್‌ಎಸ್‌ಪಿಯನ್ನು ಮಣ್ಣಿಗೆ ಸೇರಿಸಬೇಕು.


ತಾಕಿನಲ್ಲಿ ಡಿಹೆಚ್‌ಎನ್-6 ನಾಟಿ ಮಾಡಿರುವುದು

**ನೀರು ಹಾಯಿಸುವುದು ಮತ್ತು ಅಂತರ ಬೇಸಾಯ :** ನಾಟಿ ಮಾಡಿದಕೂಡಲೇ ನೀರು ಹಾಯಿಸಿ ಅನಂತರ ಮಣ್ಣು ಮತ್ತು ಹವಾಗುಣಕ್ಕೆ ಅನುಸಾರವಾಗಿ ನೀರು ಹಾಯಿಸಬೇಕು. ಕೆಂಪುಮಣ್ಣು ಆಗಿದ್ದರೆ 10-15 ದಿನಗಳಿಗೊಮ್ಮೆ ನೀರು ಹಾಯಿಸಬೇಕು. ಕಪ್ಪು ಮಣ್ಣಾಗಿದ್ದರೆ 15-20 ದಿವಸಕ್ಕೊಮ್ಮೆ ನೀರು ಕೊಡಬೇಕು. ಪ್ರತಿ ಕಟಾವು ನಂತರ ಅಂತರ ಬೇಸಾಯವನ್ನು ನೇಗಿಲು ಉಪಯೋಗಿಸಿ ಮಾಡಬೇಕು. ಡಿಹೆಚ್‌ಎನ್-6 ಒಂದು ಬಹುವಾರ್ಷಿಕ ಮೇವಿನ ಬೆಳೆಯಾಗಿದ್ದು 4-5 ವರ್ಷಗಳವರೆಗೆ ಸತತವಾಗಿ ವರ್ಷಕ್ಕೆ 5-6 ಕಟಾವಿನ ಮೂಲಕ ಅಧಿಕ ಮೇವಿನ ಇಳುವರಿಯನ್ನು

ಪಡೆಯಬಹುದು. ನಾಟಿ ಮಾಡಿದ ಎರಡು ವರ್ಷಗಳ ನಂತರ ಮುಂಗಾರು ಪ್ರಾರಂಭವಾಗುವ ಮುಂಚೆ ಪ್ರತಿ ಗುಣಿಯಿಂದ ಅರ್ದ ಬೇರು ತೆಗೆದು ಹಾಕಿ, ಎರಡು ಅಥವಾ ಮೂರು ಕಡ್ಡಿಗಳನ್ನು ಉಳಿಸಿಕೊಳ್ಳಬೇಕು. ಹೀಗೆ ಬೇಸಾಯ ಮಾಡುವುದರಿಂದ ಹೆಚ್ಚು ಹುಲ್ಲಿನ ಫಸಲನ್ನು ಪಡೆಯಬಹುದು.

**ಕಟಾವು :** ನಾಟಿ ಮಾಡಿದ 60 ದಿವಸಕ್ಕೆ ನಂತರ ಮೊದಲನೆಯ ಕಟಾವು ಮಾಡಬೇಕು. ನಂತರದ ಕಟಾವು 50–55 ದಿನಗಳಿಗೊಮ್ಮೆ ಮಾಡಬೇಕು. ರೈತರು ಬೇಗನೆ ಹುಲುಸಾಗಿ ಬೆಳೆದು ನಿಂತ ಮೇವಿನ ಬೆಳೆಯನ್ನು 50 ದಿವಸಗಳ ಒಳಗೆ ಪಶುಗಳಿಗೆ ತಿನ್ನಿಸುವುದು ವಾಡಿಕೆ, ಈ ರೀತಿ ಮಾಡುವುದರಿಂದ ನೇಪಿಯರ್ ಹುಲ್ಲಿನಲ್ಲಿ ಆಕ್ಸಾಲಿಕ್ ಆಮ್ಲ ಹೆಚ್ಚು ಇರುವುದರಿಂದ ಪಶುಗಳಿಗೆ ಆರೋಗ್ಯದ ತೊಂದರೆ ಉಂಟಾಗುತ್ತದೆ. ಆದ್ದರಿಂದ ರೈತರು ಇದನ್ನು ಗಮನದಲ್ಲಿಟ್ಟುಕೊಂಡು ಸರಿಯಾದ ಸಮಯಕ್ಕೆ ಅಂದರೆ 55 ದಿನಗಳ ನಂತರ ಕಟಾವು ಮಾಡಿ ಮೇವಾಗಿ ಪಶುಗಳಿಗೆ ಒದಗಿಸುವುದು ಸೂಕ್ತ.

**ಹಸಿರು ಮೇವಿನ ಇಳುವರಿ :** ನೀರಾವರಿ ಇದ್ದಲ್ಲಿ ಎಕರೆಗೆ ಒಂದು ವರ್ಷಕ್ಕೆ 120–130 ಟನ್ ಇಳುವರಿ ಪಡೆಯಬಹುದು.

### ಬೆಳೆಯ ವೈಶಿಷ್ಟ್ಯಗಳು

ಡಿಹೆಚ್ಎನ್–6 ಮೇವಿನ ತಳಿ ಹೆಚ್ಚಿನ ಇಳುವರಿಯನ್ನು ಕೊಡುವುದರ ಜೊತೆಗೆ ಕಡಿಮೆ ಸುಂಕು ಇರುತ್ತದೆ. ಅಲ್ಲದೆ ಪರೀಕ್ಷೆಯ ಪ್ರಕಾರ ಶೇ. 98ರಷ್ಟು ರುಚಿಕರ ಮತ್ತು ಸ್ವಾದವುಳ್ಳ ಮೇವಾಗಿರುತ್ತದೆ. ಈ ಹುಲ್ಲನ್ನು ರೈತರು ಪಶುಗಳಿಗೆ ರಸಮೇವಾಗಿ ಉಪಯೋಗಿಸುವುದಕ್ಕೆ ಯೋಗ್ಯವಾಗಿರುವುದಿಲ್ಲ. ಆದರೆ ಹೆಚ್ಚು ದನಕರುಗಳನ್ನು ಸಾಕುವ ಹಾಗೂ ನೀರಾವರಿ ಸೌಲಭ್ಯವುಳ್ಳ ರೈತರಿಗೆ ಈ ಬೆಳೆ ಬೆಳೆಯಲು ಬಹಳ ಸೂಕ್ತ.ಈ ಮೇವಿನ ತಳಿಯು ಹಲವಾರು ವೈಶಿಷ್ಟ್ಯಗಳನ್ನು ಹೊಂದಿದ್ದು ಅವು ಕೆಳಗಿನಂತಿವೆ.

1. ಎಲೆಗಳು ದೊಡ್ಡವಾಗಿದ್ದು (ಉದ್ದ ಸುಮಾರು 1 ಮೀ.ನಷ್ಟು ಅಗಲ 5 ಸೆಂಟಿಮೀಟರ್) ತೀವ್ರವಾಗಿ ಬೆಳೆಯುವುದು.
2. ಎತ್ತರವಾಗಿ (8 ರಿಂದ 10 ಅಡಿ) ಹಾಗೂ ಹುಲುಸಾಗಿ ಬೆಳೆಯುವುದರ ಜೊತೆಗೆ ಹೆಚ್ಚು ಮೇವಿನ ಇಳುವರಿ ಕೊಡುತ್ತದೆ.
3. ಹೆಚ್ಚು ಕವಲುಗಳು (20–25) ಮತ್ತು ಎಲೆಗಳನ್ನು ಹೊಂದಿದೆ
4. ಮೇವಿಗೆ ಕಾಂಡವು ದಪ್ಪದಾಗಿದ್ದು (ಸುಮಾರು 7–8 ಸೆಂ.ಮೀ.) ಮೃದು, ಸ್ವಾದಿಷ್ಟ ಹಾಗೂ ರುಚಿಕಟ್ಟಾಗಿರುತ್ತದೆ.
5. ಅಂಚುಗಳಲ್ಲಿ ಕಚ್ಚುಗಳು ಇಲ್ಲದೆ ಇರುವುದರಿಂದ ಸುಂಕು ಈ ತಳಿಯಲ್ಲಿ ಸುಂಕು ಇರುವುದಿಲ್ಲ.
6. ಸಾವಯವ ಗೊಬ್ಬರವನ್ನು ಹಾಕಿದಲ್ಲಿ ಅತ್ಯುತ್ತಮವಾಗಿ ಪ್ರತಿಕ್ರಿಯಿಸುವುದು.
7. ಪೌಷ್ಠಿಕಾಂಶ : ಕಚ್ಚಾ ಸಸಾರಜನಕ ಶೇಕಡಾ 9.5–19.7 ಜೀರ್ಣವಾಗುವಿಕೆ ಶೇಕಡಾ 68–74.

**ರೈತರ ಅನಿಸಿಕೆ :** ಕೃಷಿ ವಿಜ್ಞಾನ ಕೇಂದ್ರ ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕಿನ (2013–14) ಮತ್ತು ರಾಮನಗರ ತಾಲ್ಲೂಕಿನ ಶಾನಬೋಗನಹಳ್ಳಿಯಲ್ಲಿ 2014–15ನೇ ಸಾಲಿನಲ್ಲಿ ಕ್ರಮೇಣವಾಗಿ 10–15 ಮಂದಿ ರೈತರ ಹೊಲದಲ್ಲಿ ಈ ಮೇವಿನ ತಳಿಯ ಕ್ಷೇತ್ರ ಪರೀಕ್ಷೆ ಮತ್ತು ಮುಂಚೂಣಿ ಪ್ರಾತ್ಯಕ್ಷೆಯನ್ನು ತೆಗೆದುಕೊಳ್ಳಲಾಗಿತ್ತು. ಈ ಮೇವಿನ ತಳಿಯನ್ನು ಬೆಳೆದ ರೈತರಾದ ರಾಜು ಮತ್ತು ದೇವರಾಜ್ ರವರ ಪ್ರಕಾರ ಎನ್‌ಬಿ 21 ನೇಪಿಯರ್ ಹುಲ್ಲಿಗೆ ಹೋಲಿಸಿದರೆ ಇದೊಂದು ಅಧಿಕ ಇಳುವರಿ ಕೊಡುವ ಮೇವಾಗಿದ್ದು ಸುಂಕು ಇಲ್ಲದೆ ಇರುವುದರಿಂದ ಕಟಾವು ಮಾಡಲು ಅನುಕೂಲವಾಗಿರುತ್ತದೆ. ಜಾನುವಾರುಗಳು ಹುಲ್ಲನ್ನು ಪೋಲು ಮಾಡದೆ ಚೆನ್ನಾಗಿ ತಿಂದು (ಶೇ. 4ರಷ್ಟು) ಅಧಿಕ ಹಾಲನ್ನು ಕೊಡುತ್ತದೆ.

ಈ ಮೂಲಕ ರೈತರು ಹಾಲಿ ತಳಿಗೆ ಬದಲಾಗಿ ಡಿಹೆಚ್ಎನ್–6 ತಳಿಯನ್ನು ಬೆಳೆಯುವುದರಿಂದ ಕಡಿಮೆ ಕರ್ಚಿನಲ್ಲಿ ಅಧಿಕ ಹುಲ್ಲಿನ ಇಳುವರಿ ಹಾಗೂ ಹಾಲಿನ ಉತ್ಪಾದನೆಯನ್ನು ಪಡೆಯಬಹುದು.


ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :
ಕೃಷಿ ವಿಜ್ಞಾನ ಕೇಂದ್ರ
ಚಂದೂರಾಯನಹಳ್ಳಿ, ಕಲ್ಯಾ ಪೋಸ್ಟ್
ಮಾಗಡಿ ತಾಲ್ಲೂಕು
ರಾಮನಗರ ಜಿಲ್ಲೆ–562120.
ದೂ : 080–27100356
E-mail : kvkramanagara@gmail.com
Website : kvkramanagara.com


# ಡಿ.ಹೆಚ್.ಎನ್–6 :

## ಅಧಿಕ ಇಳುವರಿಯ ನೇಪಿಯರ್ ಹುಲ್ಲು



2014–15


ಡಾ॥ ಎಸ್. ಕಮಲಾಬಾಯಿ
ಡಾ॥ ಜಿ. ಕೇಶವರೆಡ್ಡಿ
ಡಾ॥ ಕೆ.ಹೆಚ್. ನಾಗರಾಜು